**MVC-917/2020 ಪಿ.ಡಬ್ಲ್ಯೂ-1 (ಮಗಿಮದಾಸ್ @ ಮಹಿಮಾದಾಸ್)**

ದಿನಾಂಕಃ **05.05.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ. ಎಸ್.ಜೆ.ಡಿ. ವಕೀಲರಿಂದಃ</u>**

ರಾತ್ರಿ 10 ಗಂಟೆಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ಮೈಸೂರು-ಬೆಂಗಳೂರು ಮುಖ್ಯ ರಸ್ತೆಯಲ್ಲಿ ಅಪಘಾತವಾಗಿರುತ್ತದೆ. ಅಪಘಾತ ಕಾಲಕ್ಕೆ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿ. ಹಳೇ ರಸ್ತೆಯ ಮಧ್ಯೆ ಡಿವೈಡರ್ ಇದ್ದು, ಒಂದು ರಸ್ತೆಯಲ್ಲಿ ಭಾರಿ ವಾಹನಗಳು ಹೋಗುವಷ್ಟು ಅಗಲದ ರಸ್ತೆ ಇತ್ತು ಎಂದರೆ ಸರಿ. ರಸ್ತೆಯ ಪಕ್ಕ 10 ಅಡಿ ಅಗಲದಷ್ಟು ಮಣ್ಣಿನ ಫುಟ್ ಪಾತ್ ರಸ್ತೆ ಇತ್ತು ಎಂದರೆ ಸರಿ. ಟ್ಯಾಂಕರ್ ಲಾರಿ ಚಾಲನಾ ಪರವಾನಿಗೆ ಹೊಂದಿರುತ್ತೇನೆ. ವಿಮೆಯು ಚಾಲ್ತಿಯಲ್ಲಿತ್ತು. ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಹಾಜರುಪಡಿಸಿರುವ ದಾಖಲೆಗಳ ವಿವರ ಗೊತ್ತು. ನಿಪಿ3 ಮಹಜರ್ ನಲ್ಲಿ ಟ್ಯಾಂಕರ್ ಲಾರಿ ಕೆಎ 01 ಎಜೆ 9833 ಫುಟ್ ಪಾತ್ ಮಣ್ಣಿನ ರಸ್ತೆಯಲ್ಲಿ ಇರುವುದನ್ನು ಕಾಣಿಸಲಾಗಿದೆ ಎಂದರೆ ಸರಿ. ಫುಟ್ ಪಾತ್ ನಲ್ಲಿ ಕ್ಯಾಂಟರ್ ವಾಹನದ ಹಿಂಬದಿಗೆ ನಾನೇ ಗುದ್ದಿರುತ್ತೇನೆ ಎಂದರೆ ಸರಿಯಲ್ಲ.

2. ನನಗೀಗ ಓದಿ ಹೇಳಿದಂತೆ ಮುಖ್ಯ ಪ್ರಮಾಣ ಪತ್ರದ 2 ನೇ ಕಂಡಿಕೆಯಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತದೆ ಎಂದರೆ ಸರಿ. ನಿಂತಿದ್ದ ಕ್ಯಾಂಟರ್ ಲಾರಿಗೆ ಕೆಎ 31-4154 ವಾಹನದ ಹಿಂಬದಿಗೆ ಟ್ಯಾಂಕರ್ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಡಿಕ್ಕಿ ಪಡಿಸಿ ನನ್ನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪೋಲೀಸರಿಗೆ ನಾನು ದೂರು ಕೊಟ್ಟಿರುವುದಿಲ್ಲ, ಆದರೆ ಹೇಳಿಕೆ ಕೊಟ್ಟಿರುತ್ತೇನೆ. ಪೋಲೀಸರು ತನಿಖೆ ನಡೆಸಿ ನನ್ನನ್ನು 2 ನೇ ಆರೋಪಿಯನ್ನಾಗಿ ಮಾಡಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ

ಕ್ರಿಮಿನಲ್ ಪ್ರಕರಣದಲ್ಲಿ ತಪ್ಪೊಪ್ಪಿಕೊಂಡು ದಂಡ ಪಾವತಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಮರೆಮಾಚಿ ಪರಿಹಾರ ಪಡೆಯುವ ಸಲುವಾಗಿ ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಒಳರೋಗಿಯಾಗಿ 2 ದಿನ ಚಿಕಿತ್ಸೆ ಪಡೆದಿರುತ್ತೇನೆ, ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ತದನಂತರ ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಪಘಾತವಾದ 2 ನೇ ದಿನ ಅಂದರೆ ದಿನಾಂಕ 08.02.2020 ರಲ್ಲಿ ಬೆಂಗಳೂರಿನ ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. 08.02.2020 ರಂದು ಆದ ಅಪಘಾತಕ್ಕೆ ಸಂಬಂಧಿಸಿದಂತೆ ಗಾಯಾಳು ಚಿಕಿತ್ಸೆಗಾಗಿ ಬಂದಿರುತ್ತಾರೆಂದು ನಿಪಿ8 ರಲ್ಲಿ ಬರೆದಿದೆ ಎಂದರೆ ಸರಿ.

3. ದಿನಾಂಕ 06.02.2020 ರಂದು ಆದ ಅಪಘಾತಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಿನಾಂಕ 08.02.2020 ರಂದು ಎಲ್ಲೋ ಆದ ಗಾಯಗಳಿಗೆ ಸಂಬಂಧಿಸಿದಂತೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 06.02.2020 ರಂದು ನಾನು ಹೇಳಿದಂತೆ ಯಾವುದೇ ಅಪಘಾತವಾಗಿರುವುದಿಲ್ಲ ಆ ಕಾರಣ ಸದರಿ ದಿನಾಂಕದಂದು ಆದ ಅಪಘಾತಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ವೈದೇಹಿ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವ ವಿಚಾರ ಸುಳ್ಳಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಹಾಜರುಪಡಿಸಿರುವ ಬಿಲ್ಲುಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಗಾಯಗಳು ಇನ್ನೂ ಗುಣಮುಖವಾಗಿಲ್ಲ. ಸಹಾಯರ ಖರ್ಚು ರೂ.350/-, ಕಾರು ಬಾಡಿಗೆ ಪ್ರತಿದಿನ ರೂ.4500/- ಮತ್ತು ಮುಂದುವರೆದ ವೈದ್ಯಕೀಯ ಖರ್ಚು ರೂ.1,00,000/- ಇತ್ಯಾದಿಗಳ ಕುರಿತು ದಾಖಲೆಗಳನ್ನು

ಹಾಜರುಪಡಿಸಿರುವುದಿಲ್ಲ ಮತ್ತು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಲ್ಲಿ ಫ್ರೈಟ್ ಕ್ಯಾರಿಯರ್ ಕಂಪನಿಯ ಚಾಲಕನಾಗಿ ತಿಂಗಳಿಗೆ ರೂ.20000/- ಸಂಪಾದಿಸುತ್ತಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 5 ನೇ ಎದುರುದಾರರ ಪರ ಶ್ರೀ. ಹೆಚ್.ಎಲ್.ಎಸ್. ವಕೀಲರಿಂದಃ</u>**

ಟ್ಯಾಂಕರ್ ಲಾರಿ ಕೆಎ 01 ಎಜೆ 9833 ಅನ್ನು ಎಲ್ಲಾ ರಸ್ತೆ ನಿಯಮಗಳನ್ನು ಪಾಲಿಸಿಕೊಂಡು ನಿಧಾನವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿ. ಮೈಸೂರಿನಿಂದ ಬೆಂಗಳೂರಿನ ಕಡೆಗೆ ಹೋಗುವ ಡಾಂಬಾರ್ ರಸ್ತೆಯ ಮೇಲೆ ಯಾವುದೇ ಮುಂಜಾಗ್ರತೆ ಕ್ರಮ ಅನುಸರಿಸದೇ ಕ್ಯಾಂಟರ್ ವಾಹನದ ಚಾಲಕ ನಿಲ್ಲಿಸಿದ್ದರಿಂದ ಅದರ ಹಿಂಭಾಗಕ್ಕೆ ಟ್ಯಾಂಕರ್ ಲಾರಿ ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ರಸ್ತೆ ದೀಪ ಇರಲಿಲ್ಲ ಎಂದರೆ ಸರಿ. ಕ್ಯಾಂಟರ್ ಚಾಲಕನ ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯ ಕಾರಣದಿಂದಾಗಿ ಅಪಘಾತವಾಗಿರುತ್ತದೆ ಎಂದರೆ ಸರಿ. ಆ ಕಾರಣ ಕ್ಯಾಂಟರ್ ಲಾರಿಯ ವಿಮಾ ಕಂಪನಿಯು ಪರಿಹಾರ ಕೊಡಲು ಬಾಧ್ಯಸ್ಥರಾಗಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

ಸಾಕ್ಷಿದಾರರ ಸಹಿ.